ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

ಸಂಖ್ಯೆ : ಕವಿಪ್ರನಿನಿ/ಬಿ103/25308/2021-22 ದಿನಾಂಕ : 18 JAN 2022

## ಸುತ್ತೋಲೆ

**ವಿಷಯ :** ಅನುಕಂಪ ಆಧಾರದ ನೇಮಕಾತಿಯಲ್ಲಿ ವಿದ್ಯಾರ್ಹತೆಗನುಗುಣವಾಗಿ ಸೂಚಿತ ಹುದ್ದೆಗಳಿಗೆ ನೇಮಕಾತಿಗೊಳಿಸುವ ಬಗ್ಗೆ.

**ಉಲ್ಲೇಖ:**
1. ಮಂಡಳಿ ಅಧಿಸೂಚನೆ ಸಂಖ್ಯೆ: ಕವಿಮಂ/ಬಿ5/721/80-81, ದಿನಾಂಕ: 17.04.1997.
2. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5/721/80-81, ದಿನಾಂಕ: 23.09.2011.
3. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5/721/80-81, ದಿನಾಂಕ: 20.03.2013.
4. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5/721/80-81, ದಿನಾಂಕ: 30.10.2015.
5. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ5/721/80-81, ದಿನಾಂಕ: 19.03.2016.
6. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ103/20303/2021-22, ದಿನಾಂಕ: 08.11.2021.

*****

ನಿಗಮದಲ್ಲಿ ಸೇವೆಯಲ್ಲಿರುವಾಗಲೇ ನಿಧನ ಹೊಂದಿದ ನಿಗಮದ ನೌಕರನ ಅವಲಂಬಿತ ಕುಟುಂಬದ ಅರ್ಹ ಅವಲಂಬಿತರೊಬ್ಬರಿಗೆ ಅನುಕಂಪ ಆಧಾರದ ನೇಮಕಾತಿಯನ್ನು ನೀಡಲು ದಿನಾಂಕ: 17.04.1997 ರ ಅಧಿಸೂಚನೆಯಲ್ಲಿ ನಿಯಮಾವಳಿಗಳನ್ನು ರೂಪಿಸಲಾಗಿರುತ್ತದೆ. ಅನುಕಂಪ ಆಧಾರದ ನೇಮಕಾತಿಗಾಗಿ ಸಲ್ಲಿಸುವ ಅರ್ಜಿಗಳನ್ನು ಕವಿಪ್ರನಿನಿ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳಲ್ಲಿ ಪದವೃಂದ ಸಿ ಮತ್ತು ಡಿ ಹುದ್ದೆಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಅರ್ಜಿದಾರರು ಹೊಂದಿದ್ದಲ್ಲಿ ಸದರಿ ಹುದ್ದೆಗಳಿಗೆ ನೇಮಕಾತಿಗೆ ಪರಿಗಣಿಸಲಾಗುತ್ತಿದೆ.

ಅನುಕಂಪ ಆಧಾರದ ನೇಮಕಾತಿ ಪ್ರಾಧಿಕಾರವನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಇಂಜಿನಿಯರ್(ವಿ) ಇವರುಗಳಿಗೆ ದಿನಾಂಕ: 17.09.2011 ರಿಂದ ನೀಡಲಾಗಿದ್ದು, ಅನುಕಂಪ ಆಧಾರದ ನೇಮಕಾತಿಗಾಗಿ ಸಲ್ಲಿಸುವ ಅರ್ಜಿಗಳನ್ನು ಇತ್ಯರ್ಥಪಡಿಸುವ ವಿಧಾನ ಹಾಗೂ ವಿದ್ಯಾರ್ಹತೆಗನುಗುಣವಾಗಿ ಹುದ್ದೆಗಳಿಗೆ ಪರಿಗಣಿಸುವ ಬಗ್ಗೆ ದಿನಾಂಕ: 23.09.2011 ರ ಸುತ್ತೋಲೆಯ ಕಂಡಿಕೆ-5 ರಲ್ಲಿ ತಿಳಿಸಲಾಗಿದ್ದು, ಕೆಲವು ಹುದ್ದೆಗಳಿಗೆ ನಿರ್ದಿಷ್ಟ ವಿದ್ಯಾರ್ಹತೆಯನ್ನು ಪರಿಗಣಿಸುವ ಬಗ್ಗೆಯೂ ಉಲ್ಲೇಖ-3, 4 ಹಾಗೂ 5 ರ ಸುತ್ತೋಲೆಗಳಲ್ಲಿ ಸೂಚಿಸಲಾಗಿದೆ. ಆದಾಗ್ಯೂ, ನೇಮಕಾತಿ ಪ್ರಾಧಿಕಾರಗಳು ನೇಮಕಾತಿ ನೀಡುವ ವಿಷಯದಲ್ಲಿ ಸ್ಪಷ್ಟೀಕರಣವನ್ನು ಕೋರುತ್ತಿದ್ದು, ಇದರಿಂದ ಪ್ರಕರಣಗಳನ್ನು ನಿಗದಿತ ಸಮಯದೊಳಗೆ ಇತ್ಯರ್ಥಪಡಿಸುವಲ್ಲಿ ವಿಫಲರಾಗುತ್ತಿರುವುದು ಕಂಡು ಬಂದಿದೆ. ಆದುದರಿಂದ, ಇನ್ನು ಮುಂದೆ ಅನುಕಂಪ ಆಧಾರದ ನೇಮಕಾತಿಗೆ ಅರ್ಜಿ ಸಲ್ಲಿಸುವ ಅರ್ಜಿದಾರರ ವಿದ್ಯಾರ್ಹತೆಗನುಗುಣವಾಗಿ ಈ ಕೆಳಕಂಡ ಹುದ್ದೆಗಳನ್ನು ಪರಿಗಣಿಸಿ ನೇಮಕಾತಿ ನೀಡುವಂತೆ ಈ ಮೂಲಕ ಸೂಚಿಸಲಾಗಿದೆ:

| ಕ್ರ.ಸಂ | ವಿದ್ಯಾರ್ಹತೆ | ನಿಗಧಿ ಪಡಿಸಲಾದ ಹುದ್ದೆಗಳು |
|---|---|---|
| 1 | BE/B.Tech in Electrical/Electrical & Electronics Engineering of a recognized University or Diploma in Electrical/Electrical & Electronics Engineering of a Polytechnic. | ಕಿರಿಯ ಇಂಜಿನಿಯರ್ (ವಿದ್ಯುತ್) |

| | | |
|---|---|---|
| 2 | BE/B.Tech in Civil Engineering of a recognized University or Diploma in Civil Engineering of a Polytechnic. | ಕಿರಿಯ ಇಂಜಿನಿಯರ್(ಸಿವಿಲ್) |
| 3 | Any Bachelor's Degree/Bachelor's Degree in Engineering of a recognized University other than the disciplines mentioned at (1) & (2). | ಸಹಾಯಕ |
| 4 | Pass in 2nd P.U.C or Pass in 12th Std of ISC/CBSE | ಕಿರಿಯ ಸಹಾಯಕ |
| 5 | I.T.I (Electrician/Electronic Mechanic) | ಸಹಾಯಕ ಪವರ್‌ಮ್ಯಾನ್/ಸ್ಟೇಷನ್ ಪರಿಚಾರಕ ದರ್ಜೆ-2 |
| 6 | I.T.I (Fitter) | ಸ್ಟೇಷನ್ ಪರಿಚಾರಕ ದರ್ಜೆ-2 |
| 7 | S.S.L.C from State secondary Education Board/ 10th Std. pass of CBSE/ICSE (For Male Candidates only). | ಕಿರಿಯ ಪವರ್‌ಮ್ಯಾನ್/ಕಿರಿಯ ಸ್ಟೇಷನ್ ಪರಿಚಾರಕ |
| 8 | S.S.L.C from State secondary Education Board/ 10th Std pass of CBSE/ICSE (For Female Candidates only). | ಕಚೇರಿ ಪರಿಚಾರಕ ದರ್ಜೆ-2 |
| 9 | 10th Std fail or any lower qualification including illiterates (marks card may not be insisted upon) | ಕಾವಲುಗಾರ/ ಮಾಲಿ ದರ್ಜೆ-2 (ವಿ.ಸೂ: ಮೇಲಿನ ಹುದ್ದೆಗಳು ಖಾಲಿ ಇಲ್ಲದ ಪಕ್ಷದಲ್ಲಿ **ಕಚೇರಿ ಪರಿಚಾರಕ ದರ್ಜೆ-2** ರ ಹುದ್ದೆಗೆ ಪರಿಗಣಿಸಿ ನೇಮಕಾತಿಗೊಳಿಸತಕ್ಕದ್ದು) |

**ಸೂಚನೆ :**

i) ಮುಕ್ತ ವಿಶ್ವವಿದ್ಯಾಲಯಗಳು/ಮುಕ್ತ ಶಾಲೆಗಳಿಂದ ನಡೆಸುವ 10ನೇ ತರಗತಿ ಹಾಗೂ 10+2 ಪರೀಕ್ಷೆಯನ್ನು ಹಾಗೂ ಬ್ರಿಡ್ಜ್ ಕೋರ್ಸ್ ವಿದ್ಯಾರ್ಹತೆಯನ್ನು ಕಿರಿಯ ಸ್ಟೇಷನ್ ಪರಿಚಾರಕ/ ಕಿರಿಯ ಪವರ್‌ಮ್ಯಾನ್ ಹಾಗೂ ಕಿರಿಯ ಸಹಾಯಕ ಹುದ್ದೆಯ ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

ii) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ (AICTE) ನವದೆಹಲಿ ಇವರ ಸಾರ್ವಜನಿಕ ಪ್ರಕಟಣೆ ಸಂಖ್ಯೆ UB/02/(02)/2010 ರ ಪ್ರಕಾರ ಇಂಜಿನಿಯರಿಂಗ್/ಟೆಕ್ನಾಲಜಿ ಕ್ಷೇತ್ರಗಳಲ್ಲಿ ದೂರ ಶಿಕ್ಷಣ ಮಾಧ್ಯಮದ ಮೂಲಕ ಪಡೆದ ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಹತೆಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಇವರ ಮಾನ್ಯತೆ ಇರುವುದಿಲ್ಲವೆಂದು ತಿಳಿಸಿರುವುದರಿಂದ, ಇಂತಹ ವಿಶ್ವವಿದ್ಯಾಲಯ/ವಿದ್ಯಾಸಂಸ್ಥೆಗಳಿಂದ ಪಡೆದ ಡಿಪ್ಲೊಮಾ/ಇಂಜಿನಿಯರಿಂಗ್ ಪದವಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

iii) ದೂರ ಶಿಕ್ಷಣ ಮತ್ತು ಮುಕ್ತ ವಿಶ್ವವಿದ್ಯಾಲಯಗಳಿಂದ ಪಡೆದ ಡಿಪ್ಲೊಮಾ/ಇಂಜಿನಿಯರಿಂಗ್ ಪದವಿಗಳನ್ನು ನೇಮಕಾತಿಗೆ ಪರಿಗಣಿಸಲಾಗುವುದಿಲ್ಲ.

iv) **ಅನುಕಂಪ ಆಧಾರದ ನೇಮಕಾತಿಗೆ ಯಾವುದೇ ಕಾರಣಕ್ಕೂ ಕಿರಿಯ ಮಾಪಕ ಓದುಗ ಹಾಗೂ ದಫ್ತರಿ ಹುದ್ದೆಗಳಿಗೆ ಪರಿಗಣಿಸತಕ್ಕದ್ದಲ್ಲ.**

ಕವಿಪ್ರನಿನಿ ನೌಕರಿ ಮತ್ತು ಬಡತಿ ನಿಯಮಾವಳಿಗಳ ಅಧ್ಯಾಯ-1 ರ ನಿಯಮ 17(ಡಿ) ರಲ್ಲಿ ನಿಗಮದ ನೌಕರರ ನಿಧನದಿಂದ ಅವರ ಇಡೀ ಕುಟುಂಬವು ನಿರಾಶ್ರಿತವಾಗಿ ಆರ್ಥಿಕ ಸಂಕಷ್ಟಕ್ಕೆ ಒಳಗಾದಲ್ಲಿ ಅವರ ಅವಲಂಬಿತರಿಗೆ ನಿಗಮದ ಸೇವೆಯಲ್ಲಿ ನೌಕರಿ ಭರ್ತಿ ಮತ್ತು ಬಡತಿ ನಿಯಮಾವಳಿಗಳನ್ನು ಸಡಿಲಿಸಿ ನೇಮಕಾತಿ ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಈ ಹಿನ್ನಲೆಯಲ್ಲಿ ಅನುಕಂಪ ಆಧಾರದ ನೇಮಕಾತಿ ನೀಡುವ ಸಂದರ್ಭದಲ್ಲಿ ಅರ್ಜಿದಾರರು ಹೊರ ರಾಜ್ಯದಿಂದ ವಿದ್ಯಾಭ್ಯಾಸ ಮಾಡಿದ ಸಂದರ್ಭದಲ್ಲಿಯೂ, ಅವರ ವಿದ್ಯಾರ್ಹತೆಯನ್ನು ಪರಿಗಣಿಸಿ, ನೇಮಕಾತಿಗೆ ಪರಿಗಣಿಸಬಹುದಾಗಿರುತ್ತದೆ.

ಅನುಕಂಪ ಆಧಾರದ ನೇಮಕಾತಿ ಕೋರಿ ಸಲ್ಲಿಸುವ ಅರ್ಜಿ/ಪ್ರಸ್ತಾವನೆಗಳನ್ನು ಆದ್ಯತೆಯ ಮೇರೆಗೆ ಮೂರು ತಿಂಗಳ ಅವಧಿಯೊಳಗೆ ನಿಯಮಾನುಸಾರ ಇತ್ಯರ್ಥಪಡಿಸುವಂತೆ ಎಲ್ಲಾ ನೇಮಕಾತಿ ಪ್ರಾಧಿಕಾರಿಗಳಿಗೆ ಮತ್ತೊಮ್ಮೆ ತಿಳಿಸಲಾಗಿದೆ.

ನಿರ್ದೇಶಕರು
(ಆಡಳಿತ ಮತ್ತು ಮಾನವ ಸಂಪನ್ಮೂಲ)

ಗೆ :

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಕವಿಪ್ರನಿನಿ/ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/ for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ :

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ(ನೋಂದಣಿ ಸಂಖ್ಯೆ: 659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂ ಪ.ಜಾ/ಪ.ಪಂ ಅಧಿಕಾರಿಗಳ ಸಂಘ, ಬೆಂಗಳೂರು.